# ಸುದ್ದಿ ಸಂಚಯ

## ಗುಜರಾತಿನಲ್ಲಿ ಭೂಕಂಪ

### ರಾಜಕೋಟ್ ರಾಮಕೃಷ್ಣ ಆಶ್ರಮದ ವರದಿ.

ಭೂಜ್ ವಿನಾಶದ ಅಭೂತಪೂರ್ವ ದೃಶ್ಯ. ನಯಾ ಚಕ್ಲಾದ ಭಾರತೀಬೇನ್ ಹಾಥಿ ಎಂಬ ಮಹಿಳೆಯು ಜನವರಿ ೨೬ರಂದು ತನ್ನ ಮಾವನೊಡನೆ ಕುಳಿತಿದ್ದಳು. ಎಲ್ಲಿ? ಕುಸಿದುಬಿದ್ದ ತನ್ನ ಮನೆಯ ಮಧ್ಯದಲ್ಲಿ ಅಸಹಾಯಕಳಾಗಿ. ಜನರು ಅವರು ಅತ್ತು ಕೂಗುತ್ತಿರುವುದನ್ನು ನೋಡಿಯೂ ಏನೂ ಮಾಡಲಾಗಲಿಲ್ಲ. ಹತ್ತು ಗಂಟೆಗಳ ನಂತರ ಅಳುತ್ತಲೇ ಸತ್ತುಹೋದರು. ಎಲ್ಲೆಲ್ಲಿಯೂ ಇಂತಹ ದೃಶ್ಯಗಳೇ.

ಗೋಕುಲ ಅಪಾರ್ಟ್‌ಮೆಂಟಿನಲ್ಲಿ ಅತ್ಯಂತ ಭೀಕರ ದುರಂತ. ಏಳು ಅಂತಸ್ತಿನ ಆ ಕಟ್ಟಡ ಸಂಪೂರ್ಣ ಕುಸಿದು ಬಿದ್ದು ಅದರಲ್ಲಿದ್ದ ಎಲ್ಲರನ್ನೂ ಬಲಿ ತೆಗೆದುಕೊಂಡಿತು. ನಮ್ಮ ಆಶ್ರಮದ ಭಕ್ತರಾದ ಸುರೇಶ ಥಕ್ಕರ್ ತಮ್ಮ ಇಬ್ಬರು ಗಂಡುಮಕ್ಕಳೊಂದಿಗೆ ನೆಲಮಹಡಿಯಲ್ಲಿ ಮಲಗಿದ್ದರು. ಅವರೂ ಮೃತ್ಯುವಶರಾದರು. ಭೂಜ್‌ನಲ್ಲಿದ್ದ ಸರ್ಕಾರಿ ಆಸ್ಪತ್ರೆ ಸಂಪೂರ್ಣ ನೆಲಸಮವಾಯಿತು. ಅದರಲ್ಲಿದ್ದ ಎಲ್ಲ ರೋಗಿಗಳು, ವೈದ್ಯರು ಮತ್ತು ಇತರೆ ಸಿಬ್ಬಂದಿ ವರ್ಗದವರು ಎಲ್ಲರೂ ಸಾವನ್ನಪ್ಪಿದರು. ಆ ಸಂದರ್ಭದಲ್ಲಿ ಹೇಗೋ ಹೊರಗೆ ಬಂದಿದ್ದ ಕೆಲವರು ಮಾತ್ರ ಉಳಿದರು. ಸರ್ಕಾರಿ ಅಧಿಕಾರಿಗಳು ಮತ್ತು ರಾಜಕೀಯ ಮುಂದಾಳುಗಳು ಇದ್ದ ಜಿಲ್ಲಾಧಿಕಾರಿ ಭವನ ಮತ್ತು ಅತಿಥಿಗೃಹಗಳು ನೆಲಸಮವಾದವು. ಆಡಳಿತ ಕಾರ್ಯಗಳು ಬಯಲಿನಲ್ಲಿ ಟೆಂಟುಗಳ ಒಳಗೆ ನಡೆಯುತ್ತಿತ್ತು. ಜನವರಿ ೩೧ ರಾತ್ರಿ ೧೦ ಘಂಟೆಗೆ ನಾಲ್ಕು ಜನ ಐ.ಎ.ಎಸ್ ಅಧಿಕಾರಿಗಳು ನಮ್ಮ ಬಿಡಾರಕ್ಕೆ ಬಂದು ನಮ್ಮೊಡನೆ ಖಿಚುಡಿ ಸ್ವೀಕರಿಸಿ, ರಾತ್ರಿ ಅಲ್ಲಿಯೇ ತಂಗಿದರು. ಭೂಜ್‌ನಲ್ಲಿರುವ ರಾಮಕೃಷ್ಣ ಮಂದಿರ ಮತ್ತು ಅತಿಥಿ ಗೃಹಗಳು ಸುರಕ್ಷಿತವಾಗಿವೆ—ಕೆಲವು ಕಡೆ ಸ್ವಲ್ಪ ಒಡಕುಗಳು ಬಂದಿವೆಯಷ್ಟೆ. ಧನೇತಿಯಿಂದ ೫ ಕಿಲೋ ಮೀಟರ್ ದೂರವಿರುವ ರತ್ನಾಲ್‌ನಲ್ಲಿ ೭೦೦ ಜನ ಆಹುತಿಯಾದರು, ಅಲ್ಲಿ ನಾವು ಆಹಾರ ಮತ್ತು ಟೆಂಟುಗಳನ್ನು ಹಂಚಿದೆವು.

ಸಾಯುತ್ತಿರುವ ಮತ್ತು ಸತ್ತವರಿಂದ ತುಂಬಿ ತುಳುಕುತ್ತಿರುವ ಭೂಜ್ ನಗರಕ್ಕೆ ಜೀವಕಳೆ ನೀಡುತ್ತಿದ್ದವರು ಅಂತರರಾಷ್ಟ್ರೀಯ ರಕ್ಷಣಾ ದಳದವರು ಮತ್ತು ಭಾರತೀಯ ಸೈನಿಕರು. ಅವರು ಸಾಧ್ಯವಾದ ಎಲ್ಲ ಸಹಾಯ ನೀಡುತ್ತಿದ್ದರು. ಬದುಕುಳಿದವರು ಕಳ್ಳಕಾಕರ ಭಯದಿಂದ ರಾತ್ರಿಯೆಲ್ಲ ಎಚ್ಚರಿರುತ್ತಿದ್ದರು. ಆಗಾಗ ಡಕಾಯಿತರು ಬಂದು ಬಿದ್ದ ಮನೆಗಳಿಂದ ಸಿಕ್ಕಿದುದನ್ನೆಲ್ಲ ದೋಚಿಕೊಂಡು ಹೋಗುತ್ತಿದ್ದರು. ಸರ್ಕಾರೇತರ ಸಂಸ್ಥೆಗಳ (*NGO*) ನೂರಾರು ಜನರು ತಮ್ಮ ಧನ ಮತ್ತು ಶ್ರಮವನ್ನು ಧಾರೆಯೆರೆಯುತ್ತಿದ್ದುದು ಒಂದು ಸ್ಫೂರ್ತಿದಾಯಕ ದೃಶ್ಯ.

ಬೃಹತ್ ಪ್ರಮಾಣದ ಪರಿಹಾರ ಸಾಮಗ್ರಿಗಳು ರಸ್ತೆಯ ಬದಿಯಲ್ಲೆ ರಾಶಿಹಾಕಿದ್ದರು—ಅವನ್ನು ಇರಿಸುವುದಕ್ಕೆ ಬೇರೆ ಸ್ಥಳವೇ ಇರಲಿಲ್ಲ—ಶೇಕಡ ೮೦ ಭಾಗದಷ್ಟು ಕಟ್ಟಡಗಳು ನಿರ್ನಾಮವಾಗಿದ್ದವು. ಯಾರಿಗಾಗಿ ಈ ಸಾಮಗ್ರಿಗಳನ್ನು ಕಳಿಸಲಾಗಿತ್ತೊ ಅವರೆಲ್ಲ ಅಸುನೀಗಿದ್ದರು, ಇಲ್ಲವೇ ಓಡಿಹೋಗಿದ್ದರು. ದೂರದ ಮತ್ತು ಹತ್ತಿರದ ಹಳ್ಳಿಯ ಅಪರಿಚಿತ ವ್ಯಕ್ತಿಗಳು ಬಂದು ಈ ಸಾಮಗ್ರಿಗಳನ್ನು ಹಾರಿಸಿಕೊಂಡು ಹೋಗುತ್ತಿದ್ದರು. ಅಪಾರ ವಿದೇಶೀ ವಸ್ತುಗಳನ್ನು ಕೆಲವು ಸ್ಥಳಗಳಲ್ಲಿ ರಾಶಿಹಾಕಲಾಗಿತ್ತು. ಅವುಗಳಲ್ಲಿ ಬಹುಪಾಲು ವಸ್ತುಗಳು ದೋಚಲ್ಪಟ್ಟವು. ಭೂಜ್‌ನ ಕೆಲವೇ ವ್ಯಕ್ತಿಗಳು ಅವುಗಳ ಪ್ರಯೋಜನವನ್ನು ಪಡೆದರು.

ಜನವರಿ ೩೧ರಂದು ರಾಮಕೃಷ್ಣ ಮಿಷನ್ನಿನ ಹಿರಿಯ ಸಂನ್ಯಾಸಿಗಳು ಭೂಜ್ ನಗರಕ್ಕೆ ಬಂದರು. ಅಲ್ಲಿ ಎಲ್ಲ ಸರ್ವೇ ಮಾಡಿ *ಧನೇತಿಗೆ* ಹೋದರು. ಅಲ್ಲಿ ಶೇ.೭೫ರಷ್ಟು ಮನೆಗಳು ನೆಲಸಮವಾಗಿವೆ. ಫೆಬ್ರವರಿ ೧ ರಂದು ಬೆಳಗ್ಗೆ ನಾವು ಜವಹರನಗರಕ್ಕೆ ಹೋದೆವು. ೨೪೫ ಮನೆಗಳು ಅಲ್ಲಿ ಅವಶೇಷವಾಗಿದ್ದವು. *ಮನೋಬಿ* ಎಂಬ ಇನ್ನೊಂದು ಪಟ್ಟಣದಲ್ಲಿ ೩೦೦ ಮನೆಗಳು ನಾಶ ಹೊಂದಿದ್ದವು. *ಭಚಾವ್* ಎಂಬ ಪಟ್ಟಣವು ಸಂಪೂರ್ಣ ಅವಶೇಷಗಳಿಂದ ತುಂಬಿಹೋಗಿತ್ತು. ಅಲ್ಲಿ ೧೦,೦೦೦ ಜನರು ಸತ್ತಿರಬಹುದೆಂದು ಗ್ರಾಮಸ್ಥರು ಅಂದಾಜುಮಾಡುತ್ತಾರೆ. ಎಲ್ಲಿ ನೋಡಿದರೂ ಬುಲ್ಡೋಜರ್‌ಗಳು, ಕ್ರೇನುಗಳು, ಸೈನಿಕ ಟ್ರಕ್ಕುಗಳು, ಭಗ್ನಾವಶೇಷಗಳನ್ನು ತೆಗೆದು ಸಾಯುತ್ತಿರುವವರನ್ನು ಉಳಿಸುವ ಪ್ರಯತ್ನ, ಸತ್ತವರ ದಹನ.

ಧನೇತಿ ಮತ್ತು ಭೂಜ್‌ಗಳಲ್ಲಿ ತಂಗಿರುವ ರಾಮಕೃಷ್ಣ ಮಿಷನ್ನಿನ ಸಂನ್ಯಾಸಿಗಳು ಹಗಲು ಹೊತ್ತು ಆಹಾರ, ಬಟ್ಟೆ, ಟೆಂಟುಗಳನ್ನು ಹಂಚುತ್ತಾರೆ ಮತ್ತು ಸಂಜೆಯ ಹೊತ್ತು ಭಜನೆ ಮುಂತಾದ ಆಧ್ಯಾತ್ಮಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾರೆ. ಹೆಚ್ಚು ಹೆಚ್ಚು ಸ್ಥಳೀಯ ಜನರೊಡನೆಯೇ ಅವರು ಆಹಾರ ಸ್ವೀಕರಿಸುತ್ತಾರೆ. ಹೀಗೆ ಅವರಿಗೆ ಮನಸ್ಸಮಾಧಾನವನ್ನೂ ಭರವಸೆಯನ್ನೂ ನೀಡುತ್ತಿರುವರು.

ರಾಮಕೃಷ್ಣ ಮಿಷನ್ ಹೊಸ ಒಂದು ಉಪನಗರ ನಿರ್ಮಾಣದ ಯೋಜನೆ ಹಾಕಿಕೊಂಡಿದೆ. ಗುಜರಾತಿನ ಕೈಗಾರಿಕಾ ಮಂತ್ರಿ ಶ್ರೀಸುರೇಶಭಾಯಿ ಮೆಹತಾ, ಫೆಬ್ರವರಿ ೧೬ರಂದು ಅದರ ಶಂಖುಸ್ಥಾಪನೆ ಮಾಡಿದರು. ರಾಮಕೃಷ್ಣ ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸ್ಮರಣಾನಂದಜೀಯವರು ಪ್ರಾರಂಭದ ಪೂಜೆಯನ್ನು ನೆರವೇರಿಸಿ ಸಭಿಕರನ್ನುದ್ದೇಶಿಸಿ ಮಾತನಾಡಿದರು. ❑